ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಮಂಡ್ಯ ಜಿಲ್ಲೆಯ ದರಕಾಸ್ತು/ಬಗರ್‌ಹುಕುಂ ಅಡಿ ಅರ್ಜಿ ಸಲ್ಲಿಸಿರುವ ಪ್ರಕರಣಗಳ ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

1016 (1276) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ದರಕಾಸ್ತು/ಬಗರ್ ಹುಕುಂ ಅಡಿ ಫಾರಂ ನಂಬರ್-51, 53, 57ರಲ್ಲಿ ಅರ್ಜಿ ಸಲ್ಲಿಸಿರುವವರಲ್ಲಿ 51 ಮತ್ತು 53 ರಡಿ ಅರ್ಜಿ ಸಲ್ಲಿಸಿರುವ ಪ್ರಕರಣಗಳನ್ನು ಮೊದಲು ಇತ್ಯರ್ಥಪಡಿಸದೆ ಫಾರಂ ನಂ-57 ರಲ್ಲಿ ಅರ್ಜಿ ಸಲ್ಲಿಸಿರುವ ಪ್ರಕರಣಗಳನ್ನು ಇತ್ಯರ್ಥಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, 51 ಮತ್ತು 53 ರಡಿ ಅರ್ಜಿ ಸಲ್ಲಿಸಿದ್ದ ಅರ್ಜಿಗಳನ್ನು ಯಾವಾಗ ಇತ್ಯರ್ಥ ಪಡಿಸಲಾಗುವುದು; (ತಾಲ್ಲೂಕುವಾರು 51, 53 ಮತ್ತು 57 ರಡಿ ಅರ್ಜಿ ಸಲ್ಲಿಸಿರುವವರ ವಿವರವನ್ನು ನೀಡುವುದು)

(ಆ) ಫಾರಂ ನಂಬರ್ 51 ಮತ್ತು 53 ರಡಿ ಅರ್ಜಿ ಸಲ್ಲಿಸಿರುವುದರಲ್ಲಿ ಈವರೆಗೆ ಎಷ್ಟು ಅರ್ಜಿಗಳನ್ನು ಇತ್ಯರ್ಥ ಪಡಿಸಿ ಪಹಣಿಗೆ ಮಂಜೂರಾತಿ ನೀಡಲಾಗಿದೆ; ಇನ್ನೂ ಎಷ್ಟು ಅರ್ಜಿಗಳು ಇತ್ಯರ್ಥ ಆಗಿರುವುದಿಲ್ಲ ಹಾಗೂ ಕಾರಣವೇನು? (ತಾಲ್ಲೂಕುವಾರು ವಿವರ ನೀಡುವುದು)